ಓ.ಎಸ್. ನಂ. 49/2022
ಪಿ.ಡಬ್ಲ್ಯೂ- 1

(ಇಂದು ದಿಃ 17-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:- 2** ನೇ ಪ್ರತಿವಾದಿ ಪರ ಶ್ರೀ.**TVP** ವಕೀಲರಿಂದ **:-**

ನಾನು Business ಮಾಡುತ್ತೇನೆ. ನಾನು ಗಾಣದ ಎಣ್ಣೆ ತೆಗೆದು ಮಾರಾಟ ಮಾಡುವ ವ್ಯಾಪಾರ ಮಾಡುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ಎಣ್ಣೆ ವ್ಯಾಪಾರಕ್ಕೆ Sale Tax ಕಟ್ಟುವುದಿಲ್ಲ. ಅದೇ ರೀತಿ GST ಕಟ್ಟುವುದಿಲ್ಲ. ನಾನು ಕಳೆದ 5 ತಿಂಗಳ ಹಿಂದೆ ಸದರಿ ಎಣ್ಣೆ ವ್ಯಾಪಾರ ಆರಂಭ ಮಾಡಿದ್ದೇನೆ. ಅದಕ್ಕಿಂತ ಮುಂಚೆ ವ್ಯವಸಾಯ ಮಾಡುತ್ತಿದ್ದೆ. ದೇವಿಂದ್ರಪ್ಪ ನನ್ನ ಸಹಪಾಟಿ. ನಿಪಿ-4 ನ್ನು ಬರೆಯಲು documents ಹಾಳೆಗಳನ್ನು 1 ನೇ ಪ್ರತಿವಾದಿ ಮತ್ತು ಅವಳ ಗಂಡ ದೇವಿಂದ್ರಪ್ಪ ತಂದಿದ್ದರು. ಸದರಿ Documents ಗಳನ್ನು ಯಾವ ದಿನ ಖರೀದಿ ಮಾಡಿದ್ದರು ಎಂದರೆ ಅಗ್ರಿಮೆಂಟ ಆದ ದಿನ ಖರೀದಿ ಮಾಡಿದ್ದರು ಎಂದು ಹೇಳುತ್ತಾರೆ. documents sheet ಗಳಲ್ಲಿ ಅವುಗಳನ್ನು ಖರೀದಿಸಿದ ದಿನಾಂಕ ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರ ನೋಂದಣಿ ಮಾಡಿಸಲು ಬೇಕಾದ ದಾಖಲಾತಿಗಳನ್ನು ಪಡೆದುಕೊಂಡ ನಂತರ ಖರೀದಿ ಪತ್ರ ಬರೆದುಕೊಡಬೇಕೆಂದು ಒಪ್ಪಂದ ಆಗಿತ್ತು. ನಾನು 1 ನೇ ಪ್ರತಿವಾದಿಗೆ ನಗದೂ ರೂಪದಲ್ಲಿ 10 ಲಕ್ಷ ರೂಪಯಿ ನೀಡಿದ್ದೇನೆ. ನಾನು ಸೇಡಂನ ವೆಂಕಟೇಷನ ನಗರದಲ್ಲಿ ನನ್ನ ತಾಯಿ ಹೆಸರಿನಲ್ಲಿದ್ದ ಪ್ಲಾಟನ್ನು ಮಾರಾಟ ಮಾಡಿದ್ದೆ ಸದರಿ ಹಣ ನನ್ನ ಬಳಿ ಇತ್ತು ಆ ಹಣವನ್ನು 1 ನೇ ಪ್ರತಿವಾದಿಗೆ ಪಾವತಿ ಮಾಡಿದ್ದೇನೆ. ವೆಂಕಟೇಷ ನಗರದ ಪ್ಲಾಟ ಖರೀದಿ ಮಾಡಿದ್ದರು ನನಗೆ ನಗದೂ ರೂಪದಲ್ಲಿ ಹಣ ಕೊಟ್ಟಿದ್ದರು. ಸದರಿ ಪ್ಲಾಟನ್ನು 2012-13 ರಲ್ಲಿ ಮಾರಾಟ ಮಾಡಿದ್ದೆ. ಆರೀತಿ ಮಾರಾಟ ಮಾಡಿದ್ದೆ ಎಂದು ತೋರಿಸಲು ಕ್ರಯ ಪತ್ರ ಹಾಜರುಪಡಿಸಿಲ್ಲ.

ಅಗ್ರಿಮೆಂಟ ತಯ್ಯಾರಿಸಲು 1 ನೇ ಪ್ರತಿವಾದಿ ಮಾಹಿತಿ ನೀಡಿದ್ದರು. ಮಾಹಿತಿ ಪಡೆದು ಆಸಿಫ್ ವಕೀಲರು ಅಗ್ರಿಮೆಂಟ ತಯ್ಯಾರಿಸಿದರು. ನಾನು PUC ವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. 10 ಲಕ್ಷ ಹಣ ಕೊಡುತ್ತಿರುವಾಗ ಅಗ್ರಿಮೆಂಟ ನೋಂದಣಿ ಮಾಡಿಸಿಕೊಳ್ಳಬೇಕೆಂದು ನನಗೆ ಅನಿಸಿತ್ತು ಆದರೆ ಭರವಸೆ ಮೇಲೆ ಮಾಡಿಕೊಂಡಿಲ್ಲ. ನಿಪಿ-4 ಅಗ್ರಿಮೆಂಟನ್ನು ಮೂನ್ನೂರ ವಕೀಲರ ಬಳಿ ನೋಟರಿ ಮಾಡಿಸಿದ್ದೆವೆ. ಮುನ್ನೂರ ವಕೀಲರು ಅವರ ರಿಜಿಸ್ಟರನಲ್ಲಿ ನನ್ನ ಮತ್ತು 1 ನೇ ಪ್ರತಿವಾದಿಯ ಸಹಿ ಪಡೆದಿಲ್ಲ. ಮುನ್ನೂರ ವಕೀಲರು ನೋಟರಿ ಮಾಡಿದ ಬಗ್ಗೆ ಹಣ ಪಡೆದಿದಕ್ಕೆ ರಶೀದಿ ನೀಡಿಲ್ಲ. ದಿಃ 29-05-2014 ರಂದು ರಾಜೇಂದ್ರ ಮುನ್ನೂರ ವಕೀಲರು ನಿಪಿ-4 ಕ್ಕೆ ಸಹಿ ಮಾಡಿದರು ಎಂದ ತೋರಿಸಲು ಬೇರೆ ದಾಖಲಾತಿ ಇಲ್ಲ. ದಿಃ 29-05-2014 ರಂದು ನಿಪಿ-4

ದಾಖಲಾತಿ ತಯ್ಯಾರಾಗಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ದಿನಾಂಕಂದಂದು ರಾಜೇಂದ್ರ ಮುನ್ನೂರ ವಕೀಲರು ನೋಟರಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಉದ್ದೇಶಕ್ಕಾಗಿ ನಿಪಿ-4 ನ್ನು ಸುಳ್ಳು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಿಪಿ-4 ಆದ ನಂತರ ಅದರಂತೆ ಬಾಕಿ ಹಣ ನೀಡಿ ಕ್ರಯ ಪತ್ರ ನೋಂದಣಿ ಮಾಡಿಸಿಕೊಳ್ಳಲು ನಾನು ತಯ್ಯಾರಿದ್ದೇನೆ ಎಂದು ನಾನು ಲಿಖಿತವಾಗಿ 1 ನೇ ಪ್ರತಿವಾದಿಗೆ ನೋಟಿಸ ನೀಡಿಲ್ಲ. Demonetization ದಿಃ 08-11-2016 ರಂದು ಆಗಿದೆ ಎಂದರೆ ಇರಬಹುದು. ಅಗ್ರಿಮೆಂಟ 2014 ರಲ್ಲಿ ಆಗಿದೆ. ಅಗ್ರಿಮೆಂಟ ಆದ 2 ವರ್ಷಕ್ಕೆ Demonetization ಆಗಿದೆ ಎಂದರೆ ಇರಬಹುದು. ಜನೇವರಿ-2020 ರಲ್ಲಿ ಭಾರದಲ್ಲಿ ಮೊದಲ ಬಾರಿ ಕೋವಿಡ್ ಕಾಣಿಸಿಕೊಂಡಿತ್ತು ಎಂದರೆ ಸರಿ. Demonetization ಮತ್ತು ಕೋವಿಡ್ ಕಾರಣಕ್ಕೆ ಖರೀದಿ ಪತ್ರ ನೋಂದಣಿ ಮಾಡಿಸಿಕೊಳ್ಳಲು ಯಾವುದೇ ಅಡ್ಡಿ ಇರಲಿಲ್ಲ ಎಂದರೆ ಸರಿಯಲ್ಲ.

ಕರೋನಾ ಇದ್ದ ಕಾರಣಕ್ಕೆ ಅದು ಮುಗಿದ ನಂತರ ದಾಖಲಾತಿಗಳನ್ನು ಪಡೆದುಕೊಂಡು ಖರೀದಿ ಪತ್ರ ಮಾಡಿಕೊಡುತ್ತೇನೆ ಎಂದು ನಿಪಿ-6 ನ್ನು ಬರೆದುಕೊಟ್ಟಿದ್ದಾರೆ. ನಿಪಿ-6 ರ ಪ್ರಕಾರ ನಾನು 1 ನೇ ಪ್ರತಿವಾದಿಗೆ 5 ಲಕ್ಷ ರೂಪಾಯಿ ಹಣ ನೀಡಿದ್ದೇನೆ. ನಿಪಿ-6 ನ್ನು ತಯ್ಯಾರಿಸಲು 1 ನೇ ಪ್ರತಿವಾದಿ ಛಾಪಾ ಕಾಗದ ತಂದಿದ್ದರು. ನಿಪಿ-6 ನ್ನು ತಯ್ಯಾರಿಸಲು 1 ನೇ ಪ್ರತಿವಾದಿ ಮಾಹಿತಿ ನೀಡಿದ್ದರು. ನಿಪಿ-6 ನ್ನು ನೋಟರಿ ಮಾಡಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ 2 ನೇಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದು ಹೇಗಾದರೂ ಮಾಡಿ ಸದರಿ ಮಾರಾಟವನ್ನು ರದ್ದು ಗೊಳಿಸಬೇಕೆಂಬ ದುರುದ್ದೇಶದಿಂದ ನಾನು 1 ನೇಪ್ರತಿವಾದಿ ಮತ್ತು ಅವರ ಗಂಡ ಶರಿಕ ಆಗಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ ನಂತರ ನಿಪಿ-4 ಮತ್ತು 6 ರಂತೆ ಸುಳ್ಳು ದಾಖಲಾತಿಗಳನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಮತ್ತು ಅವಳ ಗಂಡ 2 ನೇ ಪ್ರತಿವಾದಿಯಿಂದ 44 ಲಕ್ಷ ರೂಪಾಯಿ ಕ್ರಯದ ಮೊತ್ತ ಪಡೆದುಕೊಂಡು ನೋಂದಾಯಿತ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರದ ಪ್ರಕಾರ 2 ನೇಪ್ರತಿವಾದಿ ಹೆಸರಿಗೆ ಮುಟೇಷನ ಮತ್ತು ಪಹಣಿ ಆಗಿದ್ದು ಖರೀದಿ ಪತ್ರ ಆದಾಗಿನಿಂದ ಅವರೇ ದಾವಾ ಸ್ವತ್ತಿನಲ್ಲಿ ಸ್ವಾಧಿನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮಾಡಿಕೊಂಡಿದ್ದೇನೆ ಎನ್ನಲಾದ ನಿಪಿ-4 ಮತ್ತು 6 ಅಗ್ರಿಮೆಂಟಗಳು

ಓ.ಎಸ್. ನಂ. 49/2022
ಪಿ.ಡಬ್ಲ್ಯೂ- 1

ನೋಂದಣಿ ಆಗದೆ ಇರುವ ಕಾರಣಕ್ಕೆ ಸಬ್ ರಿಜಿಸ್ಟ್ರ ಕಚೇರಿ ಋಣಭಾರ ದಾಖಲಾತಿಗಳಲ್ಲಿ ಮತ್ತು ಕಂದಾಯ ದಾಖಲಾತಿಗಳಲ್ಲಿ ಎಂಟ್ರಿ ಆಗಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ದಾವಾ ಜಮೀನನ್ನು ಖರೀದಿ ಮಾಡುವ ಮುಂಚೆ ದಾವಾ ಜಮಿನಿಗೆ ಸಂಬಂಧ ಪಟ್ಟ ಕಂದಾಯ ದಾಖಲಾತಿಗಳನ್ನು ಮತ್ತು ಸಬ್ ರಿಜಿಸ್ಟ್ರಾರ ಕಚೇರಿಯಿಂದ ಋಣಭಾರ ದಾಖಲಾತಿಗಳನ್ನು ಪಡೆದುಕೊಂಡು ಪರಿಶೀಲಿಸಿ ಅವುಗಳಲ್ಲಿ ಯಾವುದೇ ಋಣಭಾರ ಅಥವಾ ಅಗ್ರಿಮೆಂಟ ಬಗ್ಗೆ ಉಲ್ಲೇಖ ಇಲ್ಲದ ಕಾರಣಕ್ಕೆ ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾಳೆ ಎಂದರೆ ಸರಿಯಲ್ಲ. 1 ನೇಪ್ರತಿವಾದಿ 2 ನೇಪ್ರತಿವಾದಿಗೆ ಖರೀದಿ ಪತ್ರ ಮಾಡಿಕೊಟ್ಟ ದಿನದಂದು 1 ನೇ ಪ್ರತಿವಾದಿ ಮತ್ತು ಅವರ ಗಂಡ ವಾದಿ ಜೊತೆ ಆಗಿದೆ ಎನ್ನಲಾದ ಖೇರಿದಿ ವ್ಯವಹಾರದ ಬಗ್ಗೆ 2 ನೇ ಪ್ರತಿವಾದಿಗೆ ಯಾವುದೇ ಮಾಹಿತಿ ಕೊಟ್ಟಿರಲಿಲ್ಲ ಕಾರಣ ಸದರಿ ದಿನದಂದು 1 ನೇ ಪ್ರತಿವಾದಿ ಮತ್ತು ವಾದಿ ನಡುವೆ ಯಾವುದೆ ಅಗ್ರಿಮೆಂಟ ಆಗಿರಲಿಲ್ಲ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಖರೀದಿ ಪತ್ರ ರದ್ದು ಪಡಿಸಬೇಕು ಆಮೂಲಕ 2 ನೇಪ್ರತಿವಾದಿಗೆ ನಷ್ಟಉಂಟು ಮಾಡಬೇಕು ಮತ್ತು ನಾನು ಮತ್ತು 1 ನೇ ಪ್ರತಿವಾ ಅಕ್ರಮಾವಾಗಿ ಲಾಭ ಮಾಡಿಕೊಳ್ಳಬೇಕೆಂಬ ದುರುದ್ದೇಶದಿಂದ 1 ನೇಪ್ರತಿವಾದಿ ಮತ್ತು ಅವರ ಗಂಡನ ಜೊತೆ ಶರಿಕ ಆಗಿ ನಿಪಿ-4 ಮತ್ತು 6 ನ್ನು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. Demonetization ಮತ್ತು Covid ಕಾರಣಕ್ಕೆ ನಿಪಿ-4 ರ ಪ್ರಕರ ಆಗಿದ್ದ ಅಗ್ರಿಮೆಂಟ ಪ್ರಕಾರ ಖರೀದಿ ಮಾಡಿಕೊಳ್ಳಲು ಆಗಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.